**ಅ.ದಾವಾ 213/2020** **ಪಿ.ಡಬ್ಲ್ಯೂ- 2**

**ದಿನಾಂಕಃ 27/03/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ- ಶ್ರೀ ಜೆ.ಯು.ಆರ್. ವಕೀಲರಿಂದ**

ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಏನು ಬರೆಯಲಾಗಿದೆ ಎಂದು ತಿಳಿದಿದೆಯೇ ಎಂದರೆ ಸಾಕ್ಷಿಯು ನನಗೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಜಮೀನನ್ನು ನೋಡಿರುವುದಾಗಿ ಹೇಳಿದ್ದು ಸದರಿ ಜಮೀನಿನ ಅಕ್ಕಪಕ್ಕ ನಿಮ್ಮ ಯಾವುದೇ ಜಮೀನು ಇಲ್ಲ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ವ್ಯಾಜ್ಯದ ಜಮೀನಿನಿಂದ ಸುಮಾರು 1 ಕಿ.ಮೀ. ದೂರದಲ್ಲಿ ನನ್ನ ಜಮೀನು ಇರುತ್ತದೆ.

2. 1ನೇ ವಾದಿಗೆ ಒಟ್ಟು 2 ಎಕರೆ 4 ಗುಂಟೆ ಜಮೀನು ಇರುತ್ತದೆ. ಸದರಿ 2 ಎಕರೆ 4 ಗುಂಟೆ ಪೈಕಿ ಸರ್ವೆ ನಂ. 190/1 ರಲ್ಲಿ 17 ಗುಂಟೆ ಇರುತ್ತದೆ. ಉಳಿದ ಜಮೀನು ಯಾವ ಸರ್ವೆ ನಂಬರಿನಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ 2 ಎಕರೆ 4 ಗುಂಟೆ ಸ್ವತ್ತಿನ ಪೂರ್ವಕ್ಕೆ ನೀರು ಹರಿಯುವ ಹಳ್ಳ, ಪಶ್ಚಿಮಕ್ಕೆ ಇಷ್ಟಲಿಂಗಪ್ಪರವರ ಜಮೀನು, ದಕ್ಷಿಣಕ್ಕೆ ನೀರು ಹರಿಯುವ ಹಳ್ಳ ಹಾಗೂ ಉತ್ತರಕ್ಕೆ ಜಯಲಿಂಗಪ್ಪ ರವರ ಜಮೀನು ಇರುತ್ತದೆ. 1ನೇ ವಾದಿ ಹಾಗೂ ಪ್ರತಿವಾದಿಯ ನಡುವೆ ಹೊಡೆದಾಟ ಆಗಿ ಕ್ರಿಮಿನಲ್ ಪ್ರಕರಣ ದಾಖಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯ ಬಗ್ಗೆ ನನಗೆ ಯಾವುದೇ ವಿಚಾರಗಳು ಗೊತ್ತಿಲ್ಲದಿದ್ದರೂ ಕೂಡ 1ನೇ ವಾದಿಯ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯಲು ಬಂದಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸ.ಇ.

ಜೆ.ಎಂ.ಎಫ್.ಸಿ., ಹೊಳೆನರಸೀಪುರ.